(ಸಭೆಯು ಬೆಳಿಗ್ಗೆ 11.15 ಗಂಟೆಗೆ ಪ್ರಾರಂಭಗೊಂಡಿತು,
ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ, ಶ್ರೀ ಎಂ.ಟಿ.ಬಿ. ನಾಗರಾಜು..

1. ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಅಧ್ಯಕ್ಷರೆ, ಶಾಸಕರ ಭವನದಲ್ಲಿ ಶಾಸಕರುಗಳಿಗೆ ಕೊಟ್ಟಿರುವಂಥಾ ತಲೆದಿಂಬುಗಳು..

(ಈ ಹಂತದಲ್ಲಿ ಮಾನ್ಯ ಅಂಜನಮೂರ್ತಿಯವರು ಸದನದಲ್ಲಿ ತಲೆದಿಂಬನ್ನು ಪ್ರದರ್ಶಿಸಿದರು) ನಾನು ಅನೇಕ ಬಾರಿ ಇದನ್ನು ಬದಲಾಯಿಸಿ ಕೊಡಿಯೆಂದು ಮನವಿಯನ್ನು ಮಾಡಿದ್ದೇನೆ. ಇಲ್ಲಿ ಹೇಳುವವರು, ಕೇಳುವವರು ಇಲ್ಲ.

ಅಧ್ಯಕ್ಷರು: : ಮಾನ್ಯ ಅಂಜಮೂರ್ತಿಯವರೆ, ನಿಮಗೆ ಅಂಥಾ ಏನಾದರೂ ಸಮಸ್ಯೆಗಳು ಇದ್ದರೆ, ಕುಳಿತು ಚರ್ಚೆ ಮಾಡಬಹುದು. ತಾವು ಯಾವುದನ್ನು ಚರ್ಚೆ ಮಾಡದೇ ನೇರವಾಗಿ ಇಲ್ಲಿ ಪ್ರದರ್ಶನ ಮಾಡುವ ರೀತಿಯಾದರೆ ಆದರೆ ಹೇಗೆ?

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕರೆ, ನಾನು ಅನೇಕ ಬಾರಿ ಸಂಬಂದಪಟ್ಟವರಿಗೆ, ನಾನು ಅನೇಕ ಬಾರಿ ಮನವಿಯನ್ನು ಮಾಡಿ, ಬದಲಾವಣೆ ಮಾಡಿ ಕೊಡಿಯೆಂದು ಹೇಳಿದ್ದೇನೆ.

ಅಧ್ಯಕ್ಷರು: ತಾವು ನಮಗೆ ಏನು ಹೇಳಿಲ್ಲ, ಇದು ನಮ್ಮ ಗಮನಕ್ಕೂ ಬಂದಿಲ್ಲ.

ಶ್ರೀ ಅಂಜನಮೂರ್ತಿ : ನಾವು ಯಾವ ಅಧಿಕಾರಿಗಳನ್ನು ಕೇಳಿದರೂ, ನಾವು ಒಗೆದಿರುವುದನ್ನು ಕೊಟ್ಟಿದ್ದೇವೆ. ನಾವು ಸಪ್ಲೈ ಮಾಡುವುದಕ್ಕೆ ಆಗುವುದಿಲ್ಲ, ನಮ್ಮ ಹತ್ತಿರ ಇಲ್ಲವೆಂದು ಹೇಳುತಾರೆ. ಇಲ್ಲಿ ನಾನು ಒಂದು ಸ್ಯಾಂಪಲ್ ಅನ್ನು ತಂದಿರುವುದು.

ಅಧ್ಯಕ್ಷರು: ಆಯಿತು, ತಾವು ನನ್ನ ಕೊಠಡಿಗೆ ಬನ್ನಿ, ಅಲ್ಲಿ ಮಾತನಾಡೋಣ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ ಇದನ್ನು ನೋಡಿ, ಸಪ್ಲೈ ಮಾಡಿರುವುದನ್ನು ನೋಡಿ, ಇದನ್ನು ವಾಣಿವಿಲಾಸ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆಯ ಲೇಬರ್ ವಾರ್ಡ್‌ನಿಂದ ತಂದು ಸಪ್ಲೈ ಮಾಡಿದ ಹಾಗೆ ಇದೆ.

ಅಧ್ಯಕ್ಷರು: ಆಯಿತು.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಲ್ಲಿ ಇವರು ಊರುಗಳಿಗೆ ಗ್ರಾಮ ವಾಸ್ತವ್ಯವೆಂದು ಹೇಳುತ್ತಾರೆ. ನಮ್ಮ ಸಂಕಟಗಳನ್ನು ಕೇಳಬೇಕಲ್ಲಾ...

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈ ರೀತಿ ವಸ್ತುಗಳನ್ನು ತಂದು ಪ್ರದರ್ಶನ ಮಾಡುವಂಥಾದ್ದು ನಿಯಮ ಬಾಹಿರವಾಗುತ್ತದೆ.

ಅಧ್ಯಕ್ಷರು: ತಾವು ಇದನ್ನು ನಮ್ಮ ಗಮನಕ್ಕೆ ತರಬೇಕು. ಅಧಿಕಾರಿಗಳು ಮಾಡದೇ ಇದ್ದರೆ, ಅದನ್ನು ನನ್ನ ಗಮನಕ್ಕೆ ತಂದು, ಆನಂತರ ಆಗದೇ ಇದ್ದರೆ, ಮಾಡಬೇಕು. ಅದು ಬಿಟ್ಟು ಇಲ್ಲಿಗೆ ತಂದು ಈ ವಿಚಾರವನ್ನು ಪ್ರಸ್ತಾಪ ಮಾಡಿದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಂಜನಮೂರ್ತಿಯವರು ಇಲ್ಲಿ ಉಪಾಧ್ಯಕ್ಷರಾಗಿ ಕೆಲಸ ಮಾಡಿದಂಥವರು. ಈ ರೀತಿ ಇಲ್ಲಿಗೆ ವಸ್ತುಗಳನ್ನು ತಂದು ಪ್ರದರ್ಶನವನ್ನು ಮಾಡುವಂಥಾದ್ದು ನಿಯಮ ಬಾಹಿರವಾಗುತ್ತದೆ. ದಯವಿಟ್ಟು ಅದನ್ನು ಹೊರಗೆ ಕಳುಹಿಸುವಂಥಾದ್ದು ಮಾಡಿ.

ಅಧ್ಯಕ್ಷರು: ಆಯಿತು, ಈಗ ತಾವು ಕುಳಿತುಕೊಳ್ಳಿ. ತಾವು ಸಮಸ್ಯೆಗಳು ಇದ್ದರೆ ಮಾತನಾಡೋಣ ಬನ್ನಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಂಜನಮೂರ್ತಿಯವರೆ, ತಾವು ಈ ರೀತಿ ಮಾಡಬಾರದು, ತಾವು ಉಪಾಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದೀರಿ. ಇಲ್ಲಿಗೆ ವಸ್ತುಗಳನ್ನು ತರುತ್ತಾರ?

ಅಧ್ಯಕ್ಷರು: ಆಯಿತು, ಮಾನ್ಯ ಅಂಜನಮೂರ್ತಿಯವರೆ, ತಾವು ಏನಾದರೂ ಇಂಥಾ ವಿಚಾರಗಳು ಇದ್ದರೆ, ನನ್ನ ಹತ್ತಿರ ಬನ್ನಿ. ಇದು ನಮಗೆ ಸಂಬಂಧಪಟ್ಟ ವಿಚಾರ. ಇಲ್ಲಿ ಇದನ್ನು ಚರ್ಚೆ ಮಾಡುವ ಅಗತ್ಯವಿಲ್ಲ. ನೀವು ಅಲ್ಲಿಗೆ ಬನ್ನಿ ನೀವು ಯಾವ ಅಧಿಕಾರಿಗಳಿಗೆ ಹೇಳಿದ್ದೀರಿ. ಅದು ಏನೆಂಬುದು, ನಮ್ಮ ಗಮನಕ್ಕೆ ಬರಲಿಲ್ಲ. ಆದುದರಿಂದ

ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನೇಲ್ಲಾ ಕರೆಸುತ್ತೇನೆ. ಅದನ್ನು ಚರ್ಚೆ ಮಾಡಿ, ಏನೇನು ಅನುಕೂಲಗಳು ಬೇಕು.

ಶ್ರೀ ಅಂಜನಮೂರ್ತಿ: ಮಾನ್ಯ ಅಧ್ಯಕ್ಷರೆ, ನಮಗೆ ಚರ್ಚೆ ಬೇಕಾಗಿಲ್ಲ, ನಮಗೆ ಶುದ್ಧವಾಗಿರುವಂಥಾದ್ದು, ಕೊಡಲಿ, ಇದರಿಂದ ನನಗೆ ಬಹಳ ತೊಂದರೆಯಾಗಿದೆಯೆಂದು ಹೇಳುತ್ತಾ ಇಲ್ಲ. ನಾವು ಬರೀ ಕೈಯನ್ನು ಇಟ್ಟುಕೊಂಡು ಮಲಗಿದ್ದೇವೆ. ಆದರೆ ಅವ್ಯವಸ್ಥೆಯಾಗಿರುವಂಥಾದ್ದು..

ಅಧ್ಯಕ್ಷರು: ಆಯಿತು, ಅದನ್ನು ನಮ್ಮ ಗಮನಕ್ಕೆ ತರಬಹುದಾಗಿತ್ತಲ್ಲಾ....

ಶ್ರೀ ಅಂಜನಮೂರ್ತಿ: ಮಾನ್ಯ ಮುಖ್ಯಮಂತ್ರಿಯವರು, ಗ್ರಾಮ ವಾಸ್ತವ್ಯ ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು: ತಾವು ಅಧಿಕಾರಿಗಳ ಗಮನಕ್ಕೆ ತಂದು, ಅವರು ಅದನ್ನು ಮಾಡದೇ ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ತಾವು ವಿಷಯವನ್ನು ದಯಮಾಡಿ ನನ್ನ ಗಮನಕ್ಕೆ ತರಬೇಕು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಇವರು ಪ್ರಚಾರಕ್ಕೋಸ್ಕರ ಇದನ್ನೇಲ್ಲಾ ಪ್ರದರ್ಶನ ಮಾಡುತ್ತಿದ್ದಾರೆ. ಇದನ್ನು ತಾವು ಹೇಗೆ ಅಲೋಮಾಡಿದ್ದೀರಿ?

ಶ್ರೀ ಅಂಜನಮೂರ್ತಿ: ನೀವು ಏಕೆ ಎದ್ದು ನಿಲ್ಲುತ್ತೀರಿ?

(ಗೊಂದಲ)

ಅಧ್ಯಕ್ಷರು: ಮಾನ್ಯ ಅಂಜನಮೂರ್ತಿಯವರೆ, ತಾವು ಬನ್ನಿ ಮಾತನಾಡೋಣ.

ಮಾನ್ಯ ಸದಸ್ಯರು: ಸನ್ಮಾನ್ಯ ಸಚಿವರು. ಸದನದ ಗೌರವವನ್ನು ಎತ್ತಿ ಹಿಡಿಯುವುದಕ್ಕೆ ಹೇಳುತ್ತಿದ್ದಾರೆ. ಅದನ್ನು ನೀವು ಯಾರು ಹೇಳುವುದಕ್ಕೆ ಎಂದು ಹೇಳುತ್ತಿದ್ದಿರಲ್ಲಾ.

(ಗೊಂದಲ)

ಪ್ರಶ್ನೆ: 666

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆ: 783

ಮಾನ್ಯ ಸದಸ್ಯರು ಹಾಜರಿರಲ್ಲಿಲ್ಲ.